ಖಾನ್ ಬಲವಂತವಾಗಿ ಮೂರು ಗ್ಲಾಸುಗಳಿಗೂ ಒಂದೊಂದು ಪೆಗ್ ವೈನ್ ಹಾಕಿ, 'ದಿಸ್ ಈಜ್ ಲಾಸ್ಟ್ ಪೆಗ್, ನೋ ಮೋರ್ ಡ್ರಿಂಕ್ಸ್ ಆಫ್ಟರ್ ದಿಸ್' ಎಂದಿದ್ದ. ಅಲ್ಲೇ ನಿಂತಿದ್ದ ಯೂಸೂಫ್ ಖಾನ್, 'ಅಣ್ಣನಿಗೆ ರಾಘವರೆಡ್ಡಿ ಬಂದರೆ ಎಲ್ಲಿಲ್ಲದ ಸಂಭ್ರಮ. ತುಂಬಾ ಎಮೋಶನಲ್ ಆಗಿಬಿಡ್ತಾರೆ' ಎಂದು ನಕ್ಕಿದ್ದ. 'ನನ್ನ ಮಿಸೆಸ್ ಇವೊತ್ತು ಲಂಡನ್ನಿನಲ್ಲಿದ್ದಾಳೆ. ಹಾಗಾಗಿ ಫ್ರೀ ಇವೊತ್ತು. ವಿಶಾಖಪಟ್ಟಣಕ್ಕೆ ಹೊರಟಿದ್ದೆ. ಆದರೆ ರಾಘವರೆಡ್ಡಿ ಮಧ್ಯಾಹ್ನ ಫೋನ್ ಮಾಡಿ ಮನೆಗೆ ಬರ್ತೀನಿ ಅಂದಾಗ ಏರ್ ಟಿಕೆಟ್ ಕ್ಯಾನ್ಸಲ್ ಮಾಡಿದೆ' ಎಂದು ಅಜೀಮ್ ಖಾನ್ ನಕ್ಕಿದ್ದ.

'ಧರ್ಮಗಳು ಬೇರೆ ಆದರೂ ನಿಮ್ಮ ನಡುವೆ ಇರುವ ಪ್ರೀತಿ, ಬಾಂಧವ್ಯಗಳು ನಿಜಕ್ಕೂ ಆಶ್ಚರ್ಯ ತರಿಸುತ್ತವೆ' ಎಂದು ಕಡೆಯ ಪೆಗ್ ವೈನ್ ಗ್ಲಾಸನ್ನು ಬಾಯಿಗಿಟ್ಟುಕೊಂಡು ಗುಟುಕರಿಸಿ ಹೇಳಿದ್ದೆ. 'ನಾವೂ, ರಾಘವರೆಡ್ಡಿ ಒಂದೇ ವಂಶಸ್ಥರು' ಎಂದು ನಗುತ್ತಾ ಅಜಮ್ ಖಾನ್ ಹೇಳಿದಾಗ ನನಗೆ ತಮಾಷೆಯೆನಿಸಿತ್ತು. 'ಹೇ ಅಜಮ್, ಸಾಕು ನಿಲ್ಲಿಸಪ್ಪ. ಇಡಿ ಜಗತ್ತಿಗೇ ಸಾರಿಕೊಂಡು ಬರೋ ಥರ ಕಾಣ್ತೀಯ ನೀನು' ಎಂದು ರಾಘವರೆಡ್ಡಿ ಗಾಬರಿಗೊಂಡವನಂತೆ ನಕ್ಕಿದ್ದ.

ಅಜಮ್ ಖಾನ್ ನನ್ನ ಕಡೆ ತಿರುಗಿ, 'ನಮ್ಮ ತಾತನಿಗೆ ಇವರ ತಾತ ತುಂಬಾ ಸಹಾಯ ಮಾಡಿ ನಾವಿಂದು ಈ ಸ್ಥಾನಕ್ಕೆ ಏರಿದ್ದೀವಿ ಅಂತ ನಿಮಗೆ ಮೊದಲೇ ಹೇಳಿದ್ದೆ. ನಮ್ಮ ತಾತನಿಗೆ ತುಂಬಾ ಕಷ್ಟ ಬಂದಾಗ ಇವರ ತಾತ ನನ್ನ ತಾತ ಮತ್ತು ಅಜ್ಜಿಯನ್ನು ಅವರ ಮನೆಯಲ್ಲೇ ಇರಿಸಿಕೊಂಡಿದ್ದನಂತೆ. ನಮ್ಮ ಅಜ್ಜಿ ಅಪೂರ್ವ ಸುಂದರಿಯಾಗಿದ್ದಳಂತೆ. ಮದುವೆಯಾಗಿ ಏಳೆಂಟು ವರ್ಷಗಳಾದರೂ ನಮ್ಮ ಅಜ್ಜಿ, ತಾತನಿಗೆ ಮಕ್ಕಳಾಗಿರಲಿಲ್ಲವಂತೆ. ಜಿಲ್ಲಾ ಆಸ್ಪತ್ರೆಯಲ್ಲಿ ತೋರಿಸಿದಾಗ ತಾತನಿಗೆ ಮಕ್ಕಳಾಗುವ ಯೋಗ ಇಲ್ಲವೆಂದು ಹೇಳಿದ್ದರಂತೆ. ಆದರೆ ರಾಘವರೆಡ್ಡಿಯವರ ಮನೆ ಸೇರಿದ ಆರು ತಿಂಗಳಲ್ಲೇ ನಮ್ಮಜ್ಜಿ ಬಸುರಿಯಾದಳಂತೆ. ಅದೇ ಟೈಮಿನಲ್ಲೇ ನಮ್ಮ ತಾತನಿಗೆ ರಾಘವರೆಡ್ಡಿಯವರ ತಾತ ತಾವೇ ದುಡ್ಡು ಕೊಟ್ಟು ಹಳೆಯ ಮನೆಯನ್ನು ಖರೀದಿಸಿ ಕೊಟ್ಟರಂತೆ. ಅಲ್ಲಿಂದಲೇ ನಮ್ಮ ತಾತನ ನಸೀಬು ಖುಲಾಯಿಸಿದ್ದಂತೆ. ನಮ್ಮ ಅಪ್ಪ ಸಾಯುವವರೆಗೂ 'ನೀವು ಕಾಕಿಗಡ್ಡ ನರಸಿಂಹರೆಡ್ಡಿಯವರ ಮೊಮ್ಮಕ್ಕಳು ಎಂತಲೇ ಹೇಳುತ್ತಿದ್ದ. ಸತ್ಯ ಹೇಳಲು ತಾಕತ್ತು ಬೇಕು' ಎಂದು ಅಜೀಮ್ ಖಾನ್ ಮಾತು ಮುಗಿಸುವಾಗ, ಯೂಸುಫ್ ಖಾನ್ ಗಂಗಾಳಗಳಿಗೆ ಹೊಗೆಯಾಡುವ ಬಿರಿಯಾನಿ ಬಡಿಸಿದ್ದ. ಅದಕ್ಕೆ ನೆಂಚಿಕೊಳ್ಳಲು ಬದನೆಕಾಯಿಯ ಎಣ್ಣೆಗಾಯಿ ಮಸಾಲೆ ಗೊಜ್ಜು. ರಾಘವರೆಡ್ಡಿ ಮೊದಲೇ ಹೇಳಿದಂತೆ ಬಿರಿಯಾನಿ ಬೆಣ್ಣೆಯಂತೆ ಬಾಯಲ್ಲಿ ಕರಗುತ್ತಿತ್ತು. ಬಿರಿಯಾನಿ ಜೊತೆಗೆ ಬಿಸಿಬಿಸಿ ಅನ್ನ ಮತ್ತು ಶೇಂಗಾ ಚಟ್ನಿ. 'ರಾಘವರೆಡ್ಡಿಯ ತಾತನಿಗೆ ಶೇಂಗಾ ಚಟ್ನಿ ಅಂದರೆ ಪಂಚಪ್ರಾಣ. ಒಂದು ಸೇರು ಶೇಂಗಾ ಬೀಜದ ಚಟ್ನಿಯನ್ನು ಕಲೆಸಿಕೊಂಡು ಒಂದು ಸೇರು ಅಕ್ಕಿಯಿಂದ ಮಾಡಿದ ಅನ್ನವನ್ನು ಐದು ನಿಮಿಷದಲ್ಲಿ ತಿಂದು ಮುಗಿಸುತ್ತಿದ್ದನಂತೆ. ನಮ್ಮ ಅಜೀಮ್ ಅಣ್ಣನಿಗೆ ವಾರದಲ್ಲಿ ಎರಡು ದಿನವಾದರೂ ಶೇಂಗಾ ಚಟ್ನಿ ಇರಲೇಬೇಕು' ಎಂದು ಯೂಸೂಫ್ ಖಾನ್ ತಾನೂ ಬಿರಿಯಾನಿ, ಅನ್ನ, ಶೇಂಗಾ ಚಟ್ನಿಯನ್ನು ತಿನ್ನತೊಡಗಿದ. ಊಟ ಮುಗಿಸಿ ನಾವು ಆಂಧ್ರ ಭವನವನ್ನು ತಲುಪಿದಾಗ ರಾತ್ರಿ ಹನ್ನೊಂದೂವರ ಗಂಟೆಯಾಗಿತ್ತು.

ಭಾಗ–18

ಬೆಳಿಗ್ಗೆ ಎಚ್ಚರವಾದಾಗ ಏಳು ಗಂಟೆಯಾಗಿತ್ತು. ಮೊಬೈಲ್‌ನಲ್ಲಿ ಅಣ್ಣ ವಿಕ್ರಮ್ ರೆಡ್ಡಿಯ ಮಿಸ್ಡ್ ಕಾಲ್ ಇತ್ತು. ರಾತ್ರಿ ಹನ್ನೆರಡೂವರೆಯಲ್ಲಿ ಫೋನ್ ಮಾಡಿದ್ದಾನೆ. ಮತ್ತೆ ಮೆಸೇಜ್ ಕೂಡಾ ಇತ್ತು. 'ಕೇಸಿನ ಸಂಬಂಧ ನಾನು ನಾಳೆ ಬೆಳಿಗ್ಗೆಯೇ ಮಸ್ಸೂರಿಯನ್ನು ಬಿಟ್ಟು ನೈನಿತಾಲಿಗೆ ಹೋಗುತ್ತಿದ್ದೇನೆ. ಅಲ್ಲಿ ಎರಡು ದಿನಗಳ ಕೆಲಸ ಮುಗಿಸಿ ಮೂರನೇ ದಿನ ದಿಲ್ಲಿಗೆ ವಾಪಸ್ಸು ಬರುತ್ತೇನೆ' ಎಂದಿತ್ತು ಮೆಸೇಜ್. ಅಣ್ಣ ವಿಕ್ರಮ್ ರೆಡ್ಡಿ ಒಂದು ಸಾರಿ ಮೆಸೇಜ್ ಮಾಡಿದರೆ ಮತ್ತೆ ಹಿಂತಿರುಗಿ ಫೋನ್ ಮಾಡಕೂಡದೆಂದೇ ಅರ್ಥ. ಹಾಗಾಗಿ ನಾನು ವಾಪಸ್ಸು ಫೋನ್ ಮಾಡುವ ತಂಟೆಗೆ ಹೋಗಲಿಲ್ಲ. ಕೂಡಲೇ ಸಿಂಧೂ ಮೆನನ್‌ಗೆ ಫೋನ್ ಮಾಡಿದ್ದೆ. ಸ್ವಿಚ್ಡಾಫ್ ಬಂದಿತ್ತು. ಚಹಾ ಕುಡಿದು ಸ್ನಾನಕ್ಕೆ ಇಳಿದಿದ್ದೆ. ರಾಘವರೆಡ್ಡಿ ಇನ್ನೂ ಮಲಗಿರಬೇಕೆಂದುಕೊಂಡೆ. ಸ್ನಾನ ಮಾಡುತ್ತಿರುವಾಗಲೇ ಫೋನ್ ರಿಂಗಾಗಿತ್ತು. ಬಾತ್ ರೂಮಿನಿಂದ ಸ್ನಾನ ಮುಗಿಸಿ ಬಂದು ಬಟ್ಟೆ ತೊಡುತ್ತಿರುವಾಗ ಬಾಗಿಲು ಬೆಲ್ ಸದ್ದು ಮಾಡಿತ್ತು. ಬಾಗಿಲು ತೆರೆದಾಗ ರಾಘವರೆಡ್ಡಿ ನಿಂತಿದ್ದ. ತಿಂಡಿ ತಿನ್ನಲು ರೆಸ್ಟೋರೆಂಟ್‌ಗೇನೆ ಹೋಗೋಣವೆಂದಿದ್ದರಿಂದ, ರೆಸ್ಟೋರೆಂಟ್‌ಗೆ ಹೋಗಿ ತಿಂಡಿ ತಿನ್ನುತ್ತಿದ್ದೆವು. ರಾಘವರೆಡ್ಡಿಗೆ ಯಾವುದೋ ಫೋನ್ ಬಂದು ತಿಂಡಿ ತಿನ್ನುತ್ತಲೇ ಏಳೆಂಟು ನಿಮಿಷ ಮಾತನಾಡಿದ್ದವನ ಮುಖ ಡಲ್ ಆಗಿತ್ತು.

'ಏನು ಸಮಾಚಾರ?' ಅವನ ಮುಖದಲ್ಲಿನ ಬದಲಾವಣೆಯ ಜಾಡು ಹಿಡಿದು ಕೇಳಿದ್ದೆ. 'ಬ್ರದರ್, ಸತ್ಯನಾರಾಯಣುಡುವಿನ ಫೋನ್. ಅದೇ ನಿಮ್ಮ ಸ್ಟೇಟ್‌ನ ಎಕ್ಸ್ ಎನರ್ಜಿ ಮಿನಿಸ್ಟರನ್ನ ಸಿಬಿಐನವರು ನಿನ್ನೆ ಸಂಜೆ ಬೆಂಗಳೂರಿನಿಂದ ದಿಲ್ಲಿಗೆ ಕರೆದು ತಂದಿದ್ದಾರಂತೆ. ಹದಿನೈದು ದಿನ ಸಿಬಿಐ ತನ್ನ ಕಸ್ಟಡಿಗೆ ತೆಗೆದುಕೊಂಡಿದೆಯಂತೆ. ಸಿಬಿಐನವರೇನಾದರೂ ಏರೋಪ್ಲೇನ್ ಎತ್ತಿದರೆ ರಾಮ್ ಗೋಪಾಲ್ ಎಲ್ಲಿ ಸತ್ಯವನ್ನು ಕಕ್ಕಿಬಿಡುತ್ತಾನೋ ಎಂದು ಅಣ್ಣ ಸತ್ಯನಾರಾಯಣುಡುಗೆ ಎದೆ ಎದೆ ಪುಕಪುಕ ಅನ್ನತೊಡಗಿದೆ. ಇಂದು ಮೂರೂವರೆ ಗಂಟೆಗೆ ವಿಮಾನದಲ್ಲಿ ದಿಲ್ಲಿಯಲ್ಲಿ ಇಳಿಯುತ್ತಿರುವನಂತೆ ಅಣ್ಣ. ಏರ್‌ಪೋರ್ಟ್‌ಗೆ ಬರಹೇಳಿದ್ದಾನೆ. ಹಾಗೆ ಪಾರ್ಟಿ ಪ್ರೆಸಿಡೆಂಟ್ ಮನೆಗೆ ಹೋಗೋಣ ಎಂದಿದ್ದಾನೆ. ಇವೊತ್ತು ಆಗ್ರಾಕ್ಕೆ ಹೋಗಿಬರೋಣ ಅಂದುಕೊಂಡಿದ್ದೆ. ಅಜೀಮ್ ಖಾನ್ ಆಗ್ರಾಕ್ಕೆ ಹೋಗಿಬರಲು ಕಾರು, ಡ್ರೈವರ್ ಎಲ್ಲವನ್ನೂ ರೆಡಿ ಮಾಡಿದ್ದ' ಎಂದು ರಾಘವರೆಡ್ಡಿ ಹೇಳುತ್ತಿರುವಾಗಲೇ ನನಗೆ ಏಕೆ ಇವೊತ್ತು ನಾನು ಮಸ್ಸೂರಿಗೆ ಹೋಗಬಾರದೆಂಬ ಯೋಚನೆ ಹುಟ್ಟಿ, 'ಹಾಗಾದರೆ ನೀವು ಇವೊತ್ತು ಅಣ್ಣನವರನ್ನು ಅಟೆಂಡ್ ಮಾಡಿ, ನಾನು ಅಮೃತಸರಕ್ಕೆ ಹೋಗಿ ಹಾಗೇ ವಾಘಾ ಬಾರ್ಡರ್ ನೋಡಿಕೊಂಡು ನಾಳೆ ಸಂಜೆಯ ವೇಳೆಗೆ ದಿಲ್ಲಿಗೆ ಬಂದುಬಿಡ್ತೀನಿ. ಅಣ್ಣ ವಿಕ್ರಮ್ ರೆಡ್ಡಿ ಯಾವುದೋ ಕೇಸ್ ಸಂಬಂಧ ನೈನಿತಾಲಿಗೆ ಹೋಗಿದ್ದಾರಂತೆ. ಸಾಧ್ಯವಾದರೆ ಅವರನ್ನು ನಾಡಿದ್ದು ಭೇಟಿಯಾಗೋಣ' ಎಂದಿದ್ದೆ. 'ಆಯ್ತುಮ ಹಾಗೇ ಆಗಲಿ. ರಾಮ್ ಗೋಪಾಲ್ ಏನಾದ್ರೂ ನಮ್ಮಣ್ಣ ಸತ್ಯನಾರಾಯಣುಡುವಿನ ಹೆಸರನ್ನೇನಾದರೂ ಸಿಬಿಐ ಮುಂದೆ ಕಕ್ಕಿದರೆ ನಿಮ್ಮ ಬ್ರದರ್ ಅನ್ನು ಭೇಟಿ ಮಾಡಿ ಏನಾದ್ರೂ ಮಾಡ್ಬೇಕಾಗ್ತದೆ' ಎಂದಿದ್ದ ರಾಘವರೆಡ್ಡಿ.

ರೆಸ್ಟೋರೆಂಟ್‌ನಿಂದ ಎದ್ದು ನಮ್ಮ ರೂಮಿಗೆ ಹೋಗಿದ್ದೆವು. ರಾಘವರೆಡ್ಡಿ ಟೀವಿ ಆನ್ ಮಾಡಿದ್ದ. ನ್ಯಾಷನಲ್ ಚಾನಲ್ಲೊಂದರಲ್ಲಿ ಬಿತ್ತರವಾಗುತ್ತಿದ್ದ ಆ ಬ್ರೇಕಿಂಗ್ ನ್ಯೂಸ್ ನೋಡಿ ರಾಘವರೆಡ್ಡಿ ಸುಸ್ತಾಗಿ ಹಾಸಿಗೆಯ ಮೇಲೆ ಉರುಳಿಕೊಂಡಿದ್ದ. ಕೋಸ್ಟಲ್ ರೆಗ್ಯುಲೇಶನ್ ಜೋನನ್ನು ಉಲ್ಲಂಘನೆ ಮಾಡಿದ್ದರಿಂದ ಕೊಚ್ಚಿನ್ನಿನ ಐದು ಐಷಾರಾಮಿ ಅಪಾರ್ಟ್‌ಮೆಂಟ್‌ಗಳನ್ನು ಕೇರಳ ಸರ್ಕಾರ ಸುಪ್ರೀಂ ಕೋರ್ಟ್‌ನ ಆದೇಶದಂತೆ ನೆಲಕ್ಕೆ ಉರುಳಿಸಿತ್ತು. ಆ ದೃಶ್ಯಗಳು ಅಮೆರಿಕದ 22/11ರ ಘಟನೆಯನ್ನು ನೆನಪಿಸುವಂತಿದ್ದವು. ವರ್ಲ್ಡ್ ಟ್ರೇಡ್ ಸೆಂಟರಿನ ಎರಡು ಬಿಲ್ಡಿಂಗುಗಳು ಕುಸಿದ ಮಾದರಿಯಲ್ಲೇ ಐದು ಅಪಾರ್ಟ್‌ಮೆಂಟ್‌ಗಳೂ ಒಂದಾದ ನಂತರ ಒಂದು ಧರೆಗುರುಳಿದ್ದವು. ಅದರಲ್ಲಿ ಕೆ.ಎಮ್. ನಯ್ಯಾರರ ಎರಡು ಅಪಾರ್ಟ್‌ಮೆಂಟ್‌ಗಳೂ ಇದ್ದವು. ಮತ್ತು ರಾಘವರೆಡ್ಡಿ ಕೂಡಾ ಅವುಗಳಲ್ಲಿ ಪಾಲುದಾರನಾಗಿದ್ದ. ಈ ಬಗ್ಗೆ ಕೆ.ಎಮ್. ನಯ್ಯಾರ್ ನಾನವರನ್ನು ಭೇಟಿಯಾದ ದಿನವೇ ಹೇಳಿದ್ದರು. ಅವುಗಳನ್ನು ಉಳಿಸಿಕೊಳ್ಳಲು ಅವರು ಕೊನೆಯವರೆಗೂ ಪ್ರಯತ್ನ ಮಾಡಿದ್ದರು. ಆದರೆ ನೆಲ್ಸನ್ನನ ಹೋರಾಟದಿಂದಾಗಿ ಸುಪ್ರೀಂ ಕೋರ್ಟ್‌ನಲ್ಲಿ ನಯ್ಯಾರರ ಪ್ರಯತ್ನ ಸೋಲನ್ನು ಕಂಡಿತ್ತು. ಆ ದೃಶ್ಯಗಳನ್ನು ನೋಡುತ್ತಿದ್ದ ರಾಘವರೆಡ್ಡಿಯ ಕಣ್ಣಲ್ಲಿ ನೀರು ಇಣುಕಿದ್ದವು.

'ಕೆ.ಎಮ್. ನಯ್ಯಾರ್ ಹೀಗಾಗುತ್ತದೆಂದು ನಾನವರನ್ನು ಕಂಡ ದಿನವೇ ಹೇಳಿದ್ದರು. ಅಪಾರ್ಟ್‌ಮೆಂಟ್ ಮಾಲಿಕರಿಗೆ ಒಂದೊಂದು ಫ್ಲಾಟಿಗೆ ಐವತ್ತು ಲಕ್ಷ ರೂಪಾಯಿ ಪರಿಹಾರ ಕೊಡಬೇಕಾಗಿ ಕೂಡಾ ಸುಪ್ರೀಂ ಕೋರ್ಟ್ ಆದೇಶಿಸಿದೆಯೆಂದು ಕೂಡಾ ನಯ್ಯಾರ್ ಹೇಳಿದ ನೆನಪು ನನಗೆ. ಅದಕ್ಕೆ ನೀವೂ ಪಾರ್ಟನರ್ ಆಗಿ ಬಂಡವಾಳ ಹೂಡಿರುವಿರೆಂದು ಕೂಡ ಹೇಳಿದ್ದರು. ಅವರು ನಷ್ಟ ಅನುಭವಿಸುವುದಕ್ಕಿಂತಲೂ ಅವರಿಂದಾಗಿ ನಿಮಗೆ ನಷ್ಟವಾಯಿತಲ್ಲ ಅನ್ನುವ ನೋವು ಮತ್ತು ಬೇಸರ ಅವರಲ್ಲಿ ಮನೆಮಾಡಿದ್ದನ್ನು ನಾನಂದು ಗುರುತಿಸಿದ್ದೆ' ಎಂದು ರಾಘವರೆಡ್ಡಿಯನ್ನು ಸಮಾಧಾನಪಡಿಸಲು ಹೇಳಿದ್ದೆ.

'ಬ್ರದರ್, ನಾವು ಖರ್ಚು ಮಾಡಿದ್ದರಲ್ಲಿ ನಲವತ್ತು ಪರ್ಸೆಂಟ್ ಕೂಡಾ ಬರುವುದಿಲ್ಲ. ಅದಕ್ಕೆ ಇನ್ನೇನು ಕಂಡೀಷನ್ಸ್ ಹಾಕ್ತಾರೋ.